## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆಯನ್ನು ಕಾರ್ಮಿಕ ಬಂಧುಗಳ ಮುಖೇನ ಅನುಷ್ಠಾಗೊಳಿಸುವ ಬಗ್ಗೆ.

******

**ಪ್ರಸ್ತಾವನೆ:**

ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್‌ರವರು ವೈಸರಾಯ್ ಕೌನ್ಸಿಲ್‌ನ ಕಾರ್ಮಿಕ ಸದಸ್ಯರಾಗಿ ಕಾರ್ಯನಿರ್ವಹಿಸಿ 75 ವರ್ಷಗ್ಗಳು ಸಂದಿವೆ. ಈ ಸಂದರ್ಭದಲ್ಲಿ ಮಾನ್ಯ ಅಂಬೇಡ್ಕರ್‌ರವರು ಸಲ್ಲಿಸಿದ ಸೇವೆಯ ಸವಿನೆನಪಿಗಾಗಿ ಒಂದೇ ಸೂರಿನಡಿ (Umbrella Scheme) ಅಸಂಘಟಿತ ಕಾರ್ಮಿಕರಿಗೆ ಯೋಜನೆಗಳನ್ನು ಹಾಗೂ ಕಲ್ಯಾಣ ಕಾರ್ಯಕ್ರಮಗಳನ್ನು ಒಗ್ಗೂಡಿಸಿ ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಎಂಬ ಯೋಜನೆಯನ್ನು ಜಾರಿಗೆ ತರಲು ಉದ್ದೇಶಿಸಲಾಗಿದೆ.

3 NOV 2017

ಕಾರ್ಮಿಕ ಇಲಾಖೆಯು ರಾಜ್ಯ ಸರ್ಕಾರದ ಅತ್ಯಂತ ಹಳೆಯ ಇಲಾಖೆಗಳಲ್ಲಿ ಒಂದಾಗಿದ್ದು, ಇದನ್ನು 1935ರಲ್ಲಿ ಸ್ಥಾಪಿಸಲಾಗಿರುತ್ತದೆ. ಇಲಾಖೆಯು ಸಂಘಟಿತ ಮತ್ತು ಅಸಂಘಟಿತ ಕ್ಷೇತ್ರದಲ್ಲಿ ದುಡಿಯುತ್ತಿರುವ ಕಾರ್ಮಿಕರ/ಶ್ರಮಿಕರ ಸರ್ವತೋಮುಖ ಅಭಿವೃದ್ಧಿಯನ್ನು ವೃದ್ಧಿಸುವ ದೆಸೆಯಲ್ಲಿ ಹೆಜ್ಜೆ ಇಟ್ಟಿದೆ. ರಾಜ್ಯದ ಅರ್ಧಕ್ಕೂ ಹೆಚ್ಚಿನ ಜನಸಂಖ್ಯೆಯನ್ನು ಪ್ರತಿಬಿಂಬಿಸುವ ಹಾಗು ವಿವಿಧ ಉದ್ದಿಮೆಗಳಲ್ಲಿ ದುಡಿಯುತ್ತಿರುವ ಕಾರ್ಮಿಕರ ಏಳಿಗೆಗಾಗಿ ಇಲಾಖೆ ಮುಂದಾಗಿದೆ. ಇಲಾಖೆಯು ವಿವಿಧ ಚಟುವಟಿಕೆಗಳ ಮೂಲಕ ಸಂಘಟಿತ ಮತ್ತು ಅಸಂಘಟಿತ ಕ್ಷೇತ್ರದಲ್ಲಿನ ರಾಜ್ಯದ ಮೂರು ಕೋಟಿ ಜನಸಂಖ್ಯೆಯನ್ನು ತಲುಪುತ್ತಿದೆ. ಸಂಘಟಿತ ಕಾರ್ಮಿಕರು ಮತ್ತು ಮಾಲೀಕರ ನಡುವೆ ಶಾಂತಿ ಹಾಗು ಸೌಹಾರ್ದಯುತ ಕೈಗಾರಿಕಾ ಬಾಂಧವ್ಯವನ್ನು ವಿವಿಧ ಕಾರ್ಮಿಕ ಕಾನೂನುಗಳ ಮುಖೇನ ಏರ್ಪಡಿಸುವುದು ಇಲಾಖೆಯ ಮುಖ್ಯ ಉದ್ದೇಶಗಳಲ್ಲಿ ಒಂದಾಗಿದೆ. ಹಾಗೆಯೇ ಹಿಂದೆಂದೂ ಅಸಂಘಟಿತ ಕ್ಷೇತ್ರದ ಕಾರ್ಮಿಕರನ್ನು ತಲುಪದಿದ್ದ ಇಲಾಖೆಯು ಈಗ ಈ ಕಾರ್ಮಿಕರಿಗೆ ವಿವಿಧ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳು/ಯೋಜನೆಗಳ ಮುಖೇನ ತಲುಪುತ್ತಿದೆ. ಪ್ರಸ್ತುತ ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆಯನ್ನು ಇಲಾಖೆಯು ಅನುಷ್ಠಾನಗೊಳಿಸಲು ಉದ್ದೇಶಿಸಿದ್ದು, ಹಿಂದುಳಿದ ಮತ್ತು ಶೋಷಿತ ಬಡ ಶ್ರಮಿಕರ ಜೀವನಮಟ್ಟ ಸುಧಾರಿಸುವುದರ ಮೂಲಕ ಅವರ ಜೀವನಕ್ಕೆ ಹೊಸ ಹರ್ಷ ಮತ್ತು ಬೆಳಕನ್ನು ಚೆಲ್ಲಲಿದೆ.

ಕಾನೂನಿನ ಅಡಿ ಸ್ಥಾಪಿತಗೊಂಡಿರುವ ಈ ಕೆಳಗಿನ ಮಂಡಳಿಗಳು ಕಾರ್ಮಿಕ ಇಲಾಖೆಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿವೆ:-

1. ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ – ಸಂಘಟಿತ ಕಾರ್ಮಿಕರಿಗಾಗಿ;

2. ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ – ಅಸಂಘಟಿತ ಕಾರ್ಮಿಕರಾದ ಕಟ್ಟಡ ಕಾರ್ಮಿಕರಿಗಾಗಿ;
3. ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ – ಇತರೆ ಅಸಂಘಟಿತ ಕಾರ್ಮಿಕರಿಗಾಗಿ.

ಕಾರ್ಮಿಕ ಇಲಾಖೆ ಮತ್ತು ಇಲಾಖೆಯಡಿ ಸ್ಥಾಪಿತವಾಗಿರುವ ಮಂಡಳಿ/ಸಂಸ್ಥೆಗಳು ತಳಮಟ್ಟದ ಕಾರ್ಮಿಕರನ್ನು ತಲುಪುವಲ್ಲಿ ಸಾಕಷ್ಟು ಪ್ರಯತ್ನಗಳನ್ನು ಮಾಡಿದ್ದರೂ ಸಹ ಅದು ಪ್ರಬಲವಾಗಿರುವುದಿಲ್ಲ. ಆದುದರಿಂದ 'ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ'ಯನ್ನು ಪರಿಕಲ್ಪಿಸಲಾಗಿದ್ದು, ಇದನ್ನು ಕಾರ್ಮಿಕ ಬಂಧುಗಳ ಮುಖೇನ ಇಲಾಖೆಯು ಅನುಷ್ಠಾನಗೊಳಿಸಲಿದೆ. ಈ ಕಾರ್ಮಿಕ ಬಂಧುಗಳು ನಗರ ಪ್ರದೇಶಗಳಲ್ಲಿ ವಾರ್ಡ್‌ಗಳ ವ್ಯಾಪ್ತಿಯಲ್ಲಿ ಹಾಗು ಗ್ರಾಮೀಣ ಪ್ರದೇಶಗಳಲ್ಲಿ ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ಏಕವ್ಯಕ್ತಿ ಸಂಸ್ಥೆಯಂತೆ ಸ್ವಯಂ ಸೇವಕರಾಗಿ ಕಮೀಷನ್ ಆಧಾರದ ಮೇಲೆ ಕಾರ್ಯನಿರ್ವಹಿಸಲಿದ್ದು, ಕಾರ್ಮಿಕರನ್ನು ಸಶಕ್ತರನ್ನಾಗಿ ಮಾಡಿ ಅವರ ಉನ್ನತೀಕರಣಕ್ಕಾಗಿ ಕೆಲಸ ಮಾಡಲಿದ್ದಾರೆ.

ಮಂಡಳಿಗಳಿಂದ ವ್ಯವಸ್ಥಿತವಾಗಿ, ಶೀಘ್ರಗತಿಯಿಂದ ಹಾಗೂ ಪರಿಣಾಮಕಾರಿಯಾಗಿ ಸೌಲಭ್ಯಗಳನ್ನು ಜಾರಿಗೊಳಿಸಲು ಎಲ್ಲಾ ಯೋಜನೆಗಳನ್ನು ಒಂದೇ ಸೂರಿನಡಿ ತರಲು ಯೋಜಿಸಿದ್ದು, ಇದಕ್ಕೆ ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಎಂದು ಕರೆಯಲು ಉದ್ದೇಶಿಸಿದೆ.

ಈ ಯೋಜನೆಯ ಸೂರಿನಡಿ ಕಟ್ಟಡ ಕಾರ್ಮಿಕರು ಮತ್ತು ಆಯ್ದ ಇತರೆ ವರ್ಗದ ಅಸಂಘಟಿತ ಕಾರ್ಮಿಕರನ್ನು ತಂದು ಸೌಲಭ್ಯಗಳನ್ನು ಜಾರಿಗೆ ತರಲು ಉದ್ದೇಶಿಸಲಾಗಿದೆ. ಕಟ್ಟಡ ಕಾರ್ಮಿಕರಿಗಾಗಿ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಮಂಡಳಿಯ ಯೋಜನೆಗಳನ್ನು ಕಾರ್ಯಗತಗೊಳಿಸುವುದರ ಜೊತೆಗೆ ಅಸಂಘಟಿತ ಕಾರ್ಮಿಕರಿಗಾಗಿ 2017-18ನೇ ಆಯವ್ಯಯದಲ್ಲಿ ಘೋಷಿಸಲಾದ ಯೋಜನೆಗಳನ್ನು ಜಾರಿಗೊಳಿಸಲಾಗುವುದು. ಈ ಸೌಲಭ್ಯಗಳು ಮಂಡಳಿಗಳಲ್ಲಿ ಸ್ವಂತ ಆದಾಯ ಮೂಲಗಳನ್ನು ಹೊಂದಿದ್ದರೂ ಸಹ, ಪ್ರಸ್ತುತ 'ಏಕ ಶೀರ್ಷಿಕೆ' ಮತ್ತು 'ಏಕ ಚಿಹ್ನೆ' ಯಡಿ ಚಾಲ್ತಿಗೊಳ್ಳುವುದರಿಂದ ಸದರಿ ಯೋಜನೆಗಳು ತ್ವರಿತ ಹಾಗೂ ಪರಿಣಾಮಕಾರಿಯಾಗಿ ಏಕಗವಾಕ್ಷಿಗಳಂತೆ ಫಲಾನುಭವಿಗಳನ್ನು ತಲುಪಲು ಸಹಾಯಕವಾಗುತ್ತದೆ. ವಿವಿಧ ಯೋಜನೆಗಳಡಿ ಗುರುತಿಸಲ್ಪಡುವ ನೋಂದಾಯಿತ ಫಲಾನುಭವಿಗಳಿಗೆ ಸ್ಮಾರ್ಟ್ ಕಾರ್ಡ್‌ಗಳನ್ನು ವಿತರಿಸಲಾಗುವುದು. ಈ ಸ್ಮಾರ್ಟ್ ಕಾರ್ಡ್‌ಗಳು ಡಾ:ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಎಂಬುದಾಗಿ ಏಕ ಶೀರ್ಷಿಕೆ ಮತ್ತು ಏಕ ಚಿಹ್ನೆಯನ್ನು ಹೊಂದಿರುತ್ತವೆ. ಪ್ರತಿ ನಿರ್ದಿಷ್ಟ ಸೌಲಭ್ಯ/ಯೋಜನೆಗಳು ಬೇರೆ ಬೇರೆ ವಿಷಯ ಹಾಗು ವಿನ್ಯಾಸವನ್ನು ಹೊಂದಿದ್ದು, ಆಯಾ ಸೌಲಭ್ಯ/ಯೋಜನೆಯ ನಿಧಿಗಳಿಂದ ಸಹಾಯಧನವನ್ನು ನೀಡಲಾಗುವುದು. ಮುಂದುವರೆದು, ಸಂಬಂಧಪಟ್ಟ ಮಂಡಳಿಯಲ್ಲಿ ತೆಗೆದುಕೊಳ್ಳುವ ತೀರ್ಮಾನದಂತೆ ಫಲಾನುಭವಿಗಳನ್ನು ನೋಂದಾಯಿಸಿ, ನಂತರ ಸ್ಮಾರ್ಟ್ ಕಾರ್ಡ್‌ಗಳನ್ನು ವಿತರಿಸಲಾಗುವುದು. ಒಂದು ಪಕ್ಷ ಬೇರೆ ಯಾವುದಾದರೂ ಅಸಂಘಟಿತ

ಕಾರ್ಮಿಕ ವಲಯಕ್ಕೆ ಮತ್ತೊಂದು ಮಂಡಳಿಯನ್ನು ರಚಿಸಿದ ಸಂದರ್ಭದಲ್ಲಿಯೂ ಸಹ, ಆ ಮಂಡಳಿಯಿಂದ ಅನುಷ್ಠಾನಗೊಳ್ಳುವ ಯೋಜನೆಗಳೂ ಕೂಡ ಇದೇ ಶೀರ್ಷಿಕೆ ಮತ್ತು ಚಿಹ್ನೆಯಡಿ ಕಾರ್ಯ ನಿರ್ವಹಿಸಲಿವೆ. ಅದರನ್ವಯ ಪ್ರಸ್ತುತ ಚಾಲ್ತಿಯಲ್ಲಿರುವ ಹಾಗೂ ಭವಿಷ್ಯದಲ್ಲಿ ರೂಪುಗೊಳ್ಳುವ ಯೋಜನೆಗಳು ಕೂಡ ಇದೇ ಶೀರ್ಷಿಕೆಯಡಿ ಬರುತ್ತವೆ.

(i) ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಎಲ್ಲಾ ಯೋಜನೆಗಳು

(ii) ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ಎಲ್ಲಾ ಯೋಜನೆಗಳು

(iii) 2017-18ನೇ ಸಾಲಿನ ಆಯವ್ಯಯದಲ್ಲಿ ಘೋಷಣೆಗೊಂಡಂತೆ ಹಮಾಲಿ ಕಾರ್ಮಿಕರು, ಗೃಹ ಕಾರ್ಮಿಕರು, ದರ್ಜಿಗಳು, ಚಿಂದಿ ಹಾಯುವವರು ಹಾಗೂ ಇತರೆ ಅಸಂಘಟಿತ ಕಾರ್ಮಿಕರಿಗೆ ಸ್ಮಾರ್ಟ್ ಕಾರ್ಡ್ ವಿತರಣೆ ಮತ್ತು ಕಲ್ಯಾಣ ಯೋಜನೆಗಳ ಅನುಷ್ಠಾನ.

ಈ ಯೋಜನೆಗಳನ್ನು ಜನಪ್ರಿಯಗೊಳಿಸಿ ಜಾರಿಗೊಳಿಸಲು ಕಾರ್ಮಿಕ ಬಂಧುಗಳ ಸಹಾಯ ಪಡೆಯುವುದು. ಇವರು ಸ್ವಯಂಸೇವಕರಾಗಿ ಪ್ರತಿಯೊಂದು ಯೋಜನೆ ಅಥವಾ ಕಾರ್ಯಕ್ರಮದಡಿ ಕಮೀಷನ್ ಆಧಾರದ ಮೇಲೆ ಕಾರ್ಯನಿರ್ವಹಿಸುವರು.

<u>ಕಾರ್ಮಿಕ ಬಂಧುವಿನ ಅರ್ಹತೆ ಮತ್ತು ವಿದ್ಯಾರ್ಹತೆ:-</u>

ಕಾರ್ಮಿಕ ಬಂಧುವಿನ ಕನಿಷ್ಠ ವಿದ್ಯಾರ್ಹತೆಯನ್ನು ಈ ಕೆಳಗಿನಂತೆ ನಿಗದಿಪಡಿಸಿದೆ:-

1) ಅವನು / ಅವಳು ಅಂಗೀಕೃತ ಶೈಕ್ಷಣಿಕ ಸಂಸ್ಥೆ/ಮಂಡಳಿಯಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಬೇಕು. ನಿರುದ್ಯೋಗಿ ಅಸಂಘಟಿತ ಕಾರ್ಮಿಕರನ್ನು ಸಹ ಪರಿಗಣಿಸಲಾಗುವುದು.
2) ಅವನು / ಅವಳು ಕಾರ್ಮಿಕ ಬಂಧುವಾಗಿ ಆಯ್ಕೆಯಾಗುವ ಗ್ರಾಮ ಪಂಚಾಯಿತಿ / ಪಟ್ಟಣದಲ್ಲಿ ನೆಲಸಿದವರಾಗಿರಬೇಕು.
3) ಅವನು / ಅವಳು ಕನಿಷ್ಠ 21 ವರ್ಷಗಳ ಮತ್ತು ಗರಿಷ್ಠ 35 ವರ್ಷಗಳ ವಯೋಮಿತಿಯನ್ನು ಹೊಂದಿರಬೇಕು. ದ್ವಿಚಕ್ರ ವಾಹನ, ಡ್ರೈವಿಂಗ್ ಲೈಸೆನ್ಸ್ ಮತ್ತು ಸ್ಮಾರ್ಟ್ ಫೋನ್ ಅನ್ನು ಹೊಂದಿರಬೇಕು ಹಾಗೂ ಕನಿಷ್ಠ ಕಂಪ್ಯೂಟರ್ ಜ್ಞಾನವನ್ನು ಪಡೆದಿರಬೇಕು.
4) ಅವನು / ಅವಳು ಕಮೀಷನ್ ಆಧಾರದ ಮೇಲೆ ಸ್ವಯಂಪ್ರೇರಿತರಾಗಿ ಸೇವೆ ಸಲ್ಲಿಸಲು ಸಿದ್ಧರಿರಬೇಕು.

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ಮತ್ತು ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ ಜಂಟಿಯಾಗಿ ಕಾರ್ಮಿಕ ಬಂಧುವನ್ನು ಪಾರದರ್ಶಕ ವ್ಯವಸ್ಥೆಯ ಮೂಲಕ ಆಯಾ ಕಾರ್ಯಸ್ಥಾನಗಳಿಗೆ ಗುರುತಿಸುವುದು. ಉದಾ: ಗ್ರಾಮ ಪಂಚಾಯಿತಿ ಪ್ರದೇಶ ಮತ್ತು ಪಟ್ಟಣ/ ನಗರಗಳ

ವ್ಯಾಪ್ತಿಯಲ್ಲಿ ಕನಿಷ್ಠ 1000 ಅಸಂಘಟಿತ ಕಾರ್ಮಿಕರು ಲಭ್ಯವಿರುವ ಸ್ಥಳಗಳಲ್ಲಿ ಪ್ರತಿ 5 ರಿಂದ 10 ವಾರ್ಡ್‌ಗಳಿಗೆ ತಲಾ ಒಂದು ಕಾರ್ಮಿಕ ಬಂಧುವನ್ನು ಗುರುತಿಸುವ ಕಾರ್ಯವನ್ನು ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯು ಕಾರ್ಮಿಕ ಅಧಿಕಾರಿಗಳ ಮುಖೇನ ಈ ಕೆಳಗಿನಂತೆ ಕೈಗೊಳ್ಳುವುದು:-

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ಮತ್ತು ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ ಜಂಟಿಯಾಗಿ ದಿನಪತ್ರಿಕೆಗಳಲ್ಲಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸುವುದು. ಜಿಲ್ಲಾ ಕಾರ್ಮಿಕ ಅಧಿಕಾರಿಗಳು ಅರ್ಹ ಹಾಗೂ ಸ್ವಯಂ ಸೇವಕರಾಗಿ ಕೆಲಸ ನಿರ್ವಹಿಸಲು ಆಸಕ್ತಿವುಳ್ಳ ವ್ಯಕ್ತಿಗಳಿಂದ ಅರ್ಜಿಗಳನ್ನು ಹಾಗು ಅವಶ್ಯಕ ದಾಖಲೆಗಳನ್ನು ಪಡೆದು ಅದನ್ನು ಪರಿಶೀಲಿಸಿ, ಅರ್ಹ ಅಭ್ಯರ್ಥಿಗಳ ಕಿರುಪಟ್ಟಿಯನ್ನು ಮಂಡಳಿಯಲ್ಲಿ ಈ ಉದ್ದೇಶಕ್ಕಾಗಿ ಅಧ್ಯಕ್ಷರ ನೇತೃತ್ವದಲ್ಲಿ ರಚನೆಯಾಗುವ ಆಯ್ಕೆ ಸಮಿತಿಯ ಅನುಮೋದನೆಗಾಗಿ ಸಲ್ಲಿಸುವುದು.

ಆಯ್ಕೆ ಸಮಿತಿಯು ಈ ಕೆಳಕಂಡ ಸದಸ್ಯರನ್ನು ಒಳಗೊಂಡಿರಬೇಕು:-

1. ಅಧ್ಯಕ್ಷರು, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ
2. ಅಧ್ಯಕ್ಷರು, ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ
3. ಕಾರ್ಯದರ್ಶಿಗಳು, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ
4. ಕಾರ್ಮಿಕ ಆಯುಕ್ತರು, ಕಾರ್ಮಿಕ ಇಲಾಖೆ
5. ಜಂಟಿ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ

ಆಯ್ಕೆಯಾದ ವ್ಯಕ್ತಿಗಳಿಗೆ ಸ್ಮಾರ್ಟ್ ಕಾರ್ಡ್‌ನ್ನು ನೀಡಿ ಎರಡೂ ಮಂಡಳಿಗಳೂ ಜಂಟಿಯಾಗಿ ತರಬೇತಿ ಕಾರ್ಯಕ್ರಮ ಆಯೋಜಿಸುವುದು. ಆಯ್ಕೆಯಾಗುವ ಅಭ್ಯರ್ಥಿಗಳ ಕಾರ್ಯ ಚಟುವಟಿಕೆಯನ್ನು ಜಿಲ್ಲಾ ಕಾರ್ಮಿಕ ಅಧಿಕಾರಿಗಳ ಮುಖೇನ ಪರಿಶೀಲಿಸಲು ಹಾಗೂ ಅವರ ಸೇವೆಗೆ ಕಮೀಷನ್ ಪಾವತಿ ಮಾಡುವ ಪ್ರಕ್ರಿಯೆಗೆ ಮಂಡಳಿಯಲ್ಲಿ ಕಾರ್ಯವ್ಯವಸ್ಥೆಯನ್ನು ರೂಪಿಸುವುದು. ಕಮೀಷನ್‌ಗಳ ಮೊತ್ತವನ್ನು ಎರಡೂ ಮಂಡಳಿಗಳು ತಮ್ಮ ಆಡಳಿತಾತ್ಮಕ ವೆಚ್ಚದಿಂದ ಭರಿಸುವುದು.

ಅರ್ಜಿ ನಮೂನೆಯನ್ನು ಅನುಬಂಧ-02ರಲ್ಲಿ ನೀಡಿದೆ.

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ಮತ್ತು ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ ಜಂಟಿಯಾಗಿ 10 ದಿನಗಳ ಒಳಗೆ ಅರ್ಜಿಗಳನ್ನು ಸಲ್ಲಿಸಲು ದಿನಪತ್ರಿಕೆಗಳಲ್ಲಿ ಜಾಹೀರಾತು ನೀಡುವುದು.

ಕಾರ್ಮಿಕ ಬಂಧುವಿನ ಕೆಲಸ ಕಾರ್ಯಗಳು:-

ಕಾರ್ಮಿಕ ಬಂಧುಗಳು ಕಾರ್ಮಿಕ ಇಲಾಖೆಯ ಮುಖೇನ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ಮತ್ತು ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯಿಂದ ಗುರುತಿಸಲ್ಪಡುವ ವ್ಯಕ್ತಿಗಳಾಗಿದ್ದು, ಇಲಾಖೆ/ಮಂಡಳಿ ನಿಗದಿಪಡಿಸುವಂತಹ ಹಾಗು ಕಾಲ ಕಾಲಕ್ಕೆ ಪರಿಷ್ಕರಿಸುವಂತಹ ಕಮೀಷನ್ ಮೊತ್ತವನ್ನು ಪಡೆಯಲು ಅರ್ಹರಿರುತ್ತಾರೆ. ಅವರ ಮುಖ್ಯ ಕೆಲಸ ಕಾರ್ಯಗಳು ಈ ಕೆಳಗಿನಂತಿರುತ್ತವೆ:-

1. ಇಲಾಖೆ ಮತ್ತು ಅದರ ಅಂಗಸಂಸ್ಥೆಗಳು ಅನುಷ್ಠಾನಗೊಳಿಸುವಂತಹ ಎಲ್ಲಾ ಶಾಸನಬದ್ಧ ಹಾಗು ಶಾಸನೇತರ ಯೋಜನೆಗಳು ಮತ್ತು ಕಾರ್ಯಕ್ರಮಗಳನ್ನು ಅರ್ಥೈಸಿಕೊಳ್ಳುವುದು;
2. ಇಲಾಖೆಯ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಯೋಜನೆಗಳ ಮಾಹಿತಿಯನ್ನು ಕಾರ್ಮಿಕರಿಗೆ ಪ್ರಸರಣ ಪಡಿಸುವುದು;
3. ಕಾರ್ಮಿಕರ ನೋಂದಣಿ ಅರ್ಜಿಗಳನ್ನು ಭರ್ತಿ ಮಾಡಲು, ಸಂಸ್ಕರಣೆ ಮಾಡಲು ಹಾಗು ಸಂಬಂಧಪಟ್ಟ ಅಧಿಕಾರಿಗಳಿಗೆ ಕಳುಹಿಸಲು ಸಹಾಯ ಮಾಡುವುದು;
4. ಕಾರ್ಮಿಕರು ನೋಂದಣಿ ಹೊಂದಲು ಹಾಗು ವಿವಿಧ ಯೋಜನೆಗಳು ಮತ್ತು ಕಾರ್ಯಕ್ರಮಗಳ ಅಡಿ ಸೌಲಭ್ಯ ಪಡೆಯಲು ಸಹಕರಿಸುವುದು;
5. ಅರ್ಹ ನೋಂದಾಯಿತ ಕಾರ್ಮಿಕರು ಗುರುತಿನ ಚೀಟಿ (ಸ್ಮಾರ್ಟ್ ಕಾರ್ಡ್/ಬಾರ್ ಕೋಡೆಡ್ ಕಾರ್ಡ್/ಪೇಪರ್ ಕಾರ್ಡ್) ಯನ್ನು ಪಡೆಯಲು ಕಾರ್ಮಿಕರು ಮತ್ತು ಅಧಿಕಾರಿಗಳಿಗೆ ಬೆಂಬಲ ನೀಡುವುದು;
6. ಕಾರ್ಮಿಕರು ವಿವಿಧ ಕಲ್ಯಾಣ/ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ಪಡೆಯಲು ಅನುಕೂಲವಾಗುವಂತೆ, ಸಂಬಂಧಪಟ್ಟ ನಮೂನೆಗಳನ್ನು ಭರ್ತಿ ಮಾಡಲು ಫಲಾನುಭವಿಗೆ ಸಹಾಯ ಮಾಡುವುದು ಮತ್ತು ಅದನ್ನು ಸಕ್ಷಮ ಪ್ರಾಧಿಕಾರಿಗಳಿಗೆ ಸಲ್ಲಿಸಿ, ಫಲಾನುಭವಿಯು ಸೌಲಭ್ಯ ಪಡೆಯುವವರೆಗೆ ಹಿಂಭಾಲಿಸುವುದು;
7. ಕಾರ್ಮಿಕರಿಗಾಗಿ ಕಾನೂನು ಅರಿವು/ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸುವುದು;
8. ಕಾರ್ಮಿಕರನ್ನು ಕೌಶಲ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮಗಳ ಅಡಿ ನೋಂದಾಯಿಸುವುದು;
9. ಇಲಾಖೆ ಅಥವಾ ಮಂಡಳಿಗಳು ಕಾಲ ಕಾಲಕ್ಕೆ ನಿಯೋಜಿಸುವಂತಹ/ವಹಿಸುವಂತಹ ಇತರೆ ಯಾವುದೇ ಕೆಲಸ ಕಾರ್ಯಗಳನ್ನು ನಿರ್ವಹಿಸುವುದು;
10. ಕಾರ್ಮಿಕರು ಇಂದಿರಾ ಕ್ಯಾಂಟೀನ್ ಸೌಲಭ್ಯವನ್ನು ಪಡೆಯುವ ಬಗ್ಗೆ ಖಾತ್ರಿ ಪಡಿಸಿಕೊಳ್ಳುವುದು.

ಕಾರ್ಮಿಕ ಬಂಧುಗಳು ಸಂಬಂಧಿಸಿದ ಮಂಡಳಿಗಳ ಆಡಳಿತಾತ್ಮಕ ಮೊತ್ತದಿಂದ ಕಾಲ ಕಾಲಕ್ಕೆ ನಿಗದಿಪಡಿಸುವಂತಹ ಕಮೀಷನ್‌ನನ್ನು ಪಡೆಯುತ್ತಾರೆ. ಇದೇ ಮಾನದಂಡವನ್ನು ಅನುಸರಿಸಿ, ಕೆಲಸದ ಒತ್ತಡವನ್ನು ಆಧರಿಸಿ, ಅವಶ್ಯವಿದ್ದಲ್ಲಿ ಹೆಚ್ಚಿನ ಸಂಖ್ಯೆಯ ಕಾರ್ಮಿಕ ಬಂಧುಗಳನ್ನು ನೇಮಕ ಮಾಡಿಕೊಳ್ಳುವುದು. ಯಾವುದೇ ಇಲಾಖೆ ಅಥವಾ ಸರ್ಕಾರೀ ಸಾಮ್ಯದ ಸಂಸ್ಥೆಯು ಕಾರ್ಮಿಕ ಬಂಧುಗಳ ಸೇವೆಯನ್ನು ಇದೇ ತರಹದ ಚಟುವಟಿಕೆಗಳಿಗೆ ಬಳಸಿಕೊಳ್ಳಲು ಇಚ್ಛಿಸಿದಲ್ಲಿ, ಆಯಾ ಇಲಾಖೆಗಳು/ಸರ್ಕಾರಿ ಸಂಸ್ಥೆಗಳು ಈ ಕೆಳಗೆ ನಮೂದಿಸಿರುವ ದರಗಳಿಗೆ ಕಡಿಮೆ ಇಲ್ಲದಂತೆ ಸದರಿ ಕಾರ್ಮಿಕ ಬಂಧುಗಳನ್ನು ನಿಯೋಜಿಸಿಕೊಳ್ಳುವುದು. ದರಗಳು ಈ ಕೆಳಗಿನಂತಿವೆ:-

| | | |
|---|---|---|
| ಅ) | ಸಮೀಕ್ಷೆ ಮತ್ತು ನೋಂದಣಿಗಾಗಿ | ರೂ.10/- ಪ್ರತಿ ನೋಂದಾಯಿತ ಕಾರ್ಮಿಕನಿಗೆ ಸ್ಮಾರ್ಟ್ ಕಾರ್ಡ್ ವಿತರಣೆಯಾದಲ್ಲಿ |
| ಆ) | ಸಮೀಕ್ಷೆ ಮತ್ತು ಸದಸ್ಯತ್ವ ಮುಂದುವರಿಕೆಗಾಗಿ | ರೂ.5/- ಪ್ರತಿ ನೋಂದಾಯಿತ ಕಾರ್ಮಿಕನ ಮುಂದುವರಿಕೆಗೆ |
| ಇ) | ವಂತಿಗೆಯ ಸಂಗ್ರಹಣೆಗಾಗಿ | ಕಾರ್ಮಿಕರ ವಂತಿಗೆಯನ್ನು ಸಂಗ್ರಹ ಮಾಡಿ ಸಂಬಂಧಪಟ್ಟ ಕಾರ್ಮಿಕ ಇಲಾಖೆಯ ಅಧಿಕಾರಿಗಳ ಖಾತೆಗೆ ಜಮೆ ಮಾಡಿದ ಮೊತ್ತದ ಶೇ.1ರಷ್ಟು |
| ಈ) | ಕ್ಲೇಮ್ ಅರ್ಜಿಗಳ ಸಲ್ಲಿಕೆ ಪ್ರಕ್ರಿಯೆ ಮತ್ತು ಶುಲ್ಕ ಸಂಗ್ರಹಣೆಗಾಗಿ | ರೂ.02/- ಪ್ರತಿ ಕ್ಲೇಮ್ ಅರ್ಜಿಯನ್ನು ಭರ್ತಿ ಮಾಡಿದ್ದಲ್ಲಿ |
| ಉ) | ಕ್ಲೇಮ್ ಅರ್ಜಿಗಳ ಸಂಸ್ಕರಣೆ ಪ್ರಕ್ರಿಯೆ ಮತ್ತು ಸೌಲಭ್ಯಗಳನ್ನು ಕಾರ್ಮಿಕರಿಗೆ ತಲುಪಿಸುವುದಕ್ಕಾಗಿ | ಶೇ.0.5 ರಷ್ಟು ಕ್ಲೇಮ್ ಮೊತ್ತ ಕಾರ್ಮಿಕರಿಗೆ ಸೌಲಭ್ಯ ತಲುಪಿಸಿದ್ದಲ್ಲಿ |
| ಊ) | ಗ್ಯಾಸ್ ಸ್ಟೌವ್, ಎಲ್‌ಪಿಜಿ ಸಂಪರ್ಕ ಮತ್ತು IEC ಚಟುವಟಿಕೆ ಹಾಗು Refill ಒದಗಿಸುವುದಕ್ಕಾಗಿ | ರೂ.10/- ಎಲ್‌ಪಿಜಿ ಸಂಪರ್ಕ ಒದಗಿಸಿದ ಪ್ರತಿ ಅರ್ಜಿಗೆ ಮತ್ತು ರೂ.05/- ಪ್ರತಿ Refill ಅನ್ನು ಫಲಾನುಭವಿಗೆ ತಲುಪಿಸಿದಾಗ |
| ಋ) | ಕಾರ್ಮಿಕರ ಕೌಶಲ್ಯಾಭಿವೃದ್ಧಿಗಾಗಿ ಐ.ಇ.ಸಿ. ಚಟುವಟಿಕೆ ಮತ್ತು ತರಬೇತಿ ಕಾರ್ಯಕ್ರಮಕ್ಕಾಗಿ ಕಾರ್ಮಿಕರ ನೋಂದಣಿ | ರೂ.25/- ಕೌಶಲ್ಯಾಭಿವೃದ್ಧಿ ತರಬೇತಿಗಾಗಿ ಪ್ರತಿ ಕಾರ್ಮಿಕನು ನೋಂದಣಿ ಹೊಂದಿದ್ದಲ್ಲಿ |

ಸರ್ಕಾರದ ಪತ್ರ ಸಂಖ್ಯೆ: ಕಾಇ 287 ಎಲ್‌ಇಟಿ 2017, ದಿನಾಂಕ: 01.09.2017ರ ಪತ್ರದಲ್ಲಿ ಸದರಿ ಯೋಜನೆ ಮತ್ತು ಚಿಹ್ನೆಯನ್ನು ಅನುಮೋದಿಸಿರುವುದರ ಬಗ್ಗೆ ಸಂಬಂಧಪಟ್ಟವರಿಗೆ ತಿಳಿಸಲಾಗಿದೆ. ಇದನ್ನು ಅನುಬಂಧ-1 ರಲ್ಲಿ ಇಡಲಾಗಿದೆ.

ಈ ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಕಾಇ 287 ಎಲ್‌ಇಟಿ 2017, ಬೆಂಗಳೂರು ದಿನಾಂಕ: 02.11.2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಅಸಂಘಟಿತ ಕಾರ್ಮಿಕರಿಗೆ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ಹಾಗೂ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಗಳು ಅನುಷ್ಠಾನಗೊಳಿಸುವ ಯೋಜನೆಗಳನ್ನು ಹಾಗೂ ಕಲ್ಯಾಣ ಕಾರ್ಯಕ್ರಮಗಳನ್ನು ಒಗ್ಗೂಡಿಸಿ ವಿವಿಧ ಯೋಜನೆಗಳಡಿ ಗುರುತಿಸಲ್ಪಟ್ಟ ಮತ್ತು ನೋಂದಾಯಿತ ಫಲಾನುಭವಿಗಳಿಗೆ **ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ** ಎಂಬ ಏಕ ಶೀರ್ಷಿಕೆ ಮತ್ತು ಏಕ ಚಿಹ್ನೆಯೊಂದಿಗೆ ಸ್ಮಾರ್ಟ್ ಕಾರ್ಡ್‌ಗಳನ್ನು ವಿತರಿಸಲು ಹಾಗೂ ಕಮೀಷನ್ ಆಧಾರದ ಮೇಲೆ ನೇಮಕಗೊಳ್ಳುವ ಕಾರ್ಮಿಕ ಬಂಧುಗಳ ಮುಖೇನ ಯೋಜನೆಯನ್ನು ಜಾರಿಗೆ ತರಲು ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

02.11.2017

(ಎಲ್.ಎಸ್. ಶ್ರೀಕಂಠಬಾಬು)
ಸರ್ಕಾರದ ಉಪಕಾರ್ಯದರ್ಶಿ,
ಕಾರ್ಮಿಕ ಇಲಾಖೆ.

**ಇವರಿಗೆ,**

ಸಂಕಲನಕಾರರು, ಸರ್ಕಾರಿ ಮುದ್ರಣಾಲಯ, ಬೆಂಗಳೂರು ಇವರಿಗೆ ಈ ಅಧಿಸೂಚನೆಯನ್ನು ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸಿ, ಸದರಿ ಪ್ರಕಟಣೆಯ 200 ಪ್ರತಿಗಳನ್ನು ಸರ್ಕಾರದ ಕಾರ್ಯದರ್ಶಿ, ಕಾರ್ಮಿಕ ಇಲಾಖೆ, 4ನೇ ಮಹಡಿ, ವಿಕಾಸಸೌಧ, ಬೆಂಗಳೂರು–1 ಇವರಿಗೆ, ಕಳುಹಿಸುವಂತೆ ಕೋರಲಾಗಿದೆ.

1. ಕಾರ್ಮಿಕ ಆಯುಕ್ತರು, ಕಾರ್ಮಿಕ ಇಲಾಖೆ, ಬೆಂಗಳೂರು.
2. ಕಾರ್ಯದರ್ಶಿ, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಬೆಂಗಳೂರು.
3. ಜಂಟಿ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ, ಬೆಂಗಳೂರು.
4. ಕಲ್ಯಾಣ ಆಯುಕ್ತರು, ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ, ಬೆಂಗಳೂರು.
5. ಎಲ್ಲಾ ಜಿಲ್ಲೆಗಳ ಕಾರ್ಮಿಕ ಅಧಿಕಾರಿಗಳಿಗೆ (ಕಾರ್ಮಿಕರ ಆಯುಕ್ತರ ಮೂಲಕ)

**ಪ್ರತಿಗಳು:–**

1. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ (ಸಚಿವ ಸಂಪುಟ), ವಿಧಾನಸೌಧ (ಪ್ರಕರಣ ಸಂಖ್ಯೆ: ಸಿ:685/2017)
2. ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ, ವಾರ್ತಾ ಭವನ, ಇನ್‌ಫೆಂಟ್ರಿ ರಸ್ತೆ, ಬೆಂಗಳೂರು.
3. ಮಾನ್ಯ ಕಾರ್ಮಿಕ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕಾರ್ಮಿಕ ಇಲಾಖೆ.
5. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಕಾರ್ಮಿಕ ಇಲಾಖೆ.
6. ಶಾಖಾ ರಕ್ಷ ಕಡತ/ಹೆಚ್ಚುವರಿ ಪ್ರತಿ.